5) ಶ್ರೀ ಗಣೇಶ ದೇವಾಲಯದ ಹತ್ತಿರ ಸೇತುವೆ ನಿರ್ಮಾಣ,

6) ಕೊಳಚೆ ನೀರು ಡೈವರ್‌ಶನ್ ಕಾಲುವೆ ,

7) ಕೆರೆಯ ಕೋರಿ ನಿರ್ಮಾಣ,

8) ನಡಿಗೆ ಮಾರ್ಗದ ಏರಿ, ಇತ್ಯಾದಿ.

ಆ) ಮೇಲಿನ ಎಲ್ಲಾ ಕಾಮಗಾರಿಗಳಿಗೆ ಒಟ್ಟು ವೆಚ್ಚ ರೂ. 730.00 ಲಕ್ಷಗಳು .

ಇ) ಗರಿಷ್ಟ ಆಳ – 4.40 ಮೀ.

ಕನಿಷ್ಠ ಆಳ – 1.50 ಮೀ.

ಹೂಳು ತೆಗೆದಿರುವ ಪ್ರಮಾಣ – 4.32 ಲಕ್ಷ ಘನ ಮೀ.

ಹೂಳು ತೆಗೆಯುವ ಮುನ್ನ – 600 ಮಿಲಿಯನ್ ಲೀಟರ್,

ಹೂಳು ತೆಗೆದ ನಂತರ– 1100 ಮಿಲಿಯನ್ ಲೀಟರ್ .

ಈ) ಬಿ.ನಾರಾಯಣಪುರ ಕಲ್ಲುಗಣಿ ಗುಂಡಿ
ಹೆಣ್ಣೂರು ಬಂಡೆ ಗುಂಡಿ
ಎ.ಎಸ್.ಸಿ. ರಕ್ಷಣಾ ಪ್ರದೇಶ } 4.32 ಲಕ್ಷ ಘನ ಮೀ.
ಕೃಷಿ ವಿಶ್ವವಿದ್ಯಾಲಯ ಆವರಣ

ಉ) 2005–06ನೇ ಸಾಲಿನ ಆಯವ್ಯಯ ಇನ್ನೂ ತಯಾರಾಗಿರುವುದಿಲ್ಲ.

ಊ) 1 ಭೂ ನಿನ್ಯಾಸ ಕಾಮಗಾರಿಗಳು

2 ನಡಿಗೆ ದಾರಿಯಲ್ಲಿ ಇಂಟರ್ ಲಾಕ್ ಪೇವರ್ಸ್

3 ಕೂಡು ಬೆಂಚುಗಳು ಹಾಗೂ ಗ್ಯಾಲರಿ

4 ಆರ್ನಮೆಂಟಲ್ ಕಂಬಗಳು ಹಾಗೂ ರೇಲಿಂಗ್ಸ್

5 ಪ್ರವೇಶ ದ್ವಾರಗಳು, ಇತ್ಯಾದಿಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

295(600) ಶ್ರೀ ನಿರ್ಮಲ್ ಸುರಾನಾ, ಎಂಎಲ್‌ಎ (ಭಾರತಿನಗರ) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಭವಿಷ್ಯ ಬೆಂಗಳೂರು ನಿರ್ಮಾಣದಡಿಯಲ್ಲಿ ಸರ್ವತೋಮುಖ ಅಭಿವೃದ್ಧಿಯ ಚಿಂತನೆಯ ಭಾಗವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವಲ್ಲಿ ಭೌಗೋಳಿಕ ತಾರತಮ್ಯ ಅಥವಾ ಮಲತಾಯಿ ಧೋರಣೆ ಎಸಗಿರುವುದು ಸರ್ಕಾರ ಮನಗಂಡಿದೆಯೇ ;

ಆ) ಬೆಂಗಳೂರು ಮಹಾನಗರ ಪಾಲಿಕೆ 12 ವಿಧಾನಸಭಾ ಕ್ಷೇತ್ರಗಳು ಹಾಗೂ 3 ಲೋಕಸಭಾ ಕ್ಷೇತ್ರಗಳನ್ನೊಳಗೊಂಡಿದ್ದು, ಬೆಂಗಳೂರು ಉತ್ತರ ಲೋಕಸಭಾ ವ್ಯಾಪ್ತಿಯಲ್ಲಿ ಬರುವ 3 ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 3 ರಿಂದ 8 ಕಾಮಗಾರಿಗಳನ್ನು ಮಾತ್ರ ಗುರುತಿಸಿ ಕೈಗೆತ್ತಿಕೊಂಡಿರುವುದು ಮಹಾನಗರ ಪಾಲಿಕೆಯ ಅವೈಜ್ಞಾನಿಕ/ಆತುರದ ನಿರ್ಧಾರವಲ್ಲವೆ ;

ಇ) ಈ ರೀತಿಯ ಅಸಮರ್ಪಕ/ಅವೈಜ್ಞಾನಿಕ ನಿರ್ಣಯವನ್ನು ಸರಿಪಡಿಸುವಲ್ಲಿ ಸಮತೋಲನ ಕಾಯ್ದುಕೊಳ್ಳುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು :

ಈ) ಭಾರತೀನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ವಾರ್ಡ್ ಸಂ. 82ರ ನಾಲಾ ರಸ್ತೆ, ಲಕ್ಷ್ಮೀಪುರಂ ಮುಖ್ಯರಸ್ತೆ ಸಬ್‌ವೇ ನಿರ್ಮಾಣ ಮರ್ಫಿ ರಸ್ತೆ ಜೈರಾಜ್‌ನಗರ ಮುಖ್ಯ ರಸ್ತೆಯ ಸಬ್‌ವೇ ನಿರ್ಮಾಣ ಕಾಮಗಾರಿಗಳಿಗೆ ಹಣಕಾಸು ವ್ಯವಸ್ಥೆ ಕಲ್ಪಿಸಿರುವುದರ ಬಗ್ಗೆ ವಿವರಗಳನ್ನು ನೀಡುವುದು ?

ಶ್ರೀ ಎನ್. ಧರ್ಮಸಿಂಗ್(ಮುಖ್ಯಮಂತ್ರಿಯವರು) :

ಅ) ಬೆಂಗಳೂರು ಮಹಾನಗರದ ಎಲ್ಲಾ ವಾರ್ಡ್‌ಗಳು ಒಂದೇ ಸಮಾನವಾಗಿ ಅಭಿವೃದ್ಧಿ ಹೊಂದದೇ ಇರುವುದು ಗಮನಕ್ಕೆ ಬಂದಿದೆ. ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನ ಗೊಳಿಸುವಲ್ಲಿ ಭೌಗೋಳಿಕೆ ತಾರತಮ್ಯ ಅಥವಾ ಮಲತಾಯಿ ಧೋರಣೆ ಅನುಸರಿಸಿರುವುದಿಲ್ಲ.

ಆ) ಬೆಂಗಳೂರು ನಗರದಲ್ಲಿ ಎಲ್ಲಾ 100 ವಾರ್ಡ್‌ಗಳಲ್ಲಿ ತಲಾ 65.00 ಲಕ್ಷ(45.00+20.00) ರೂಗಳ ಕಾಮಗಾರಿ ಪಟ್ಟಿಯನ್ನು ಮಂಜೂರು ಮಾಡಲಾಗಿದೆ. ಇದರ ಜೊತೆಗೆ ನಗರದ ಉತ್ತರ ಭಾಗದ ಕೆಲವು ವಾರ್ಡ್‌ಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡು ಈಗಾಗಲೇ 2004–05ನೇ ಸಾಲಿನಲ್ಲಿ 15.00 ಕೋಟಿ ರೂ.ಗಳ ಅನುದಾನ ಅವಕಾಶ ಮಾಡಿಕೊಳ್ಳಲಾಗಿದೆ. ಆದ್ದರಿಂದ ಇದರಲ್ಲಿ ಯಾವುದೇ ಅವೈಜ್ಞಾನಿಕ / ಆತುರದ ನಿರ್ಧಾರವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) 2004–05ನೇ ಸಾಲಿನಲ್ಲಿ ಈ ವಾರ್ಡಿಗೆ ಒದಗಿಸಿರುವ ರೂ. 65.00 ಲಕ್ಷಗಳ ಆಯವ್ಯಯದಲ್ಲಿ ಈ ಕಾಮಗಾರಿಗಳನ್ನು ಪ್ರಸ್ತಾಪಿಸಿರುವುದಿಲ್ಲ. ಈ ಕಾಮಗಾರಿಗಳ ಅಗತ್ಯತೆ ಮತ್ತು Technical feasibility ಅಧ್ಯಯನ ಮಾಡಿ ಮುಂದಿನ ಕ್ರಮ ಜರುಗಿಸಲಾಗುವುದು.

ಶ್ರೀ ನಿರ್ಮಲ್ ಸುರಾನಾ, ಎಂಎಲ್‌ಎ(ಭಾರತಿನಗರ) ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ವಲಯ ಸಾಮಾನ್ಯ ಕಾಮಗಾರಿ (ಅಧಿಕ ಕಾಮಗಾರಿ) ಶೀರ್ಷಿಕೆಯಡಿ 100 ವಾರ್ಡ್‌ಗಳಲ್ಲಿ ತಲಾ ಒಂದು ರಸ್ತೆಯನ್ನು ಮಾದರಿ ರಸ್ತೆಯಾಗಿ ಪರಿವರ್ತಿಸುವ ಬಗ್ಗೆ ಇರತಕ್ಕ ವೈಜ್ಞಾನಿಕ ಚಿಂತನೆ ಏನು :

ಆ) 2004–05ನೇ ಸಾಲಿನಲ್ಲಿ ಇದಕ್ಕಾಗಿ ಮೀಸಲಿಟ್ಟ ಹಣ ಎಷ್ಟು ;

ಇ) ಪ್ರತಿ ವಾರ್ಡಿನ ಒಂದು ಮಾದರಿ ರಸ್ತೆಗೆ ಮೀಸಲಿಟ್ಟ ಹಣ ಎಷ್ಟು :

ಈ) ಈ ಹಣವನ್ನು ಯಾವ ಯಾವ ಬಾಬ್ತಿಗೆ ಖರ್ಚು ಮಾಡಲಾಗುವುದು ;

ಉ) ಈ ಮಾದರಿ ರಸ್ತೆ ನಿರ್ಮಾಣವನ್ನು ಎಲ್ಲಾ 100 ವಾರ್ಡ್‌ಗಳಲ್ಲಿ ತಲಾ ಒಂದು ರಸ್ತೆ ಎಂಬ ತತ್ವದಡಿ ಅನುಷ್ಠಾನಗೊಳಿಸಲಾಗಿದೆಯೇ ;

ಊ) ಹಾಗಿದ್ದಲ್ಲಿ, ವಾರ್ಡ್‌ವಾರು–ವಲಯ ಕಾಮಗಾರಿ (ಅಧಿಕ ಕಾಮಗಾರಿಲೆಕ್ಕ ಶೀರ್ಷಿಕೆಯಡಿ ನಿರ್ಮಿಸಲಾಗಿರುವ ರಸ್ತೆಗಳು ಯಾವುವು(ರಸ್ತೆಗಳ ಉದ್ದ, ಅಗಲ, ದಪ್ಪ ಮತ್ತು ಖರ್ಚಾಗಿರುವ ಹಣದ ಪೂರ್ಣ ಮಾಹಿತಿ ನೀಡುವುದು ?

ಶ್ರೀ ಎನ್. ಧರ್ಮಸಿಂಗ್(ಮುಖ್ಯಮಂತ್ರಿಯವರು) :

ಅ) ಬೆಂಗಳೂರು ಮಹಾನಗರ ಪಾಲಿಕೆಯ 100 ವಾರ್ಡ್‌ಗಳಲ್ಲಿ ತಲಾ ಒಂದು ರಸ್ತೆಯನ್ನು ಮಾದರಿ ರಸ್ತೆಯನ್ನಾಗಿ ಪರಿವರ್ತಿಸಿ ಈ ರಸ್ತೆಯನ್ನು ಮಾದರಿಯಾಗಿಟ್ಟುಕೊಂಡು ಇನ್ನು ಮುಂದೆ ಅಭಿವೃದ್ಧಿಪಡಿಸುವ ರಸ್ತೆಗಳನ್ನು ಇದೇ ಮಾದರಿಯಾಗಿ ಅಭಿವೃದ್ಧಿಪಡಿಸಬೇಕೆಂಬುದೇ ವೈಜ್ಞಾನಿಕ ಚಿಂತನೆ.

ಆ) 2004–05ನೇ ಸಾಲಿನಲ್ಲಿ ಈ ಬಾಬ್ತಿಗೆ ಯಾವುದೇ ಹಣ ಮೀಸಲಿಟ್ಟಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

297(294) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಂಗಾ ಮೇಲ್ದಂಡೆ ಯೋಜನೆಯಿಂದ ಬ್ಯಾಡಗಿ ತಾಲ್ಲೂಕನ್ನು ಮಾತ್ರ ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಯೋಜನೆಯಲ್ಲಿ ಸುತ್ತಮುತ್ತಲಿನ ಎಲ್ಲಾ ತಾಲ್ಲೂಕುಗಳನ್ನು ಸೇರಿಸಿ ಬ್ಯಾಡಗಿ ತಾಲ್ಲೂಕನ್ನು ಮಾತ್ರ ಕೈ ಬಿಡಲು ಕಾರಣಗಳೇನು ;

ಇ) ಬ್ಯಾಡಗಿ ತಾಲ್ಲೂಕು ಪ್ರದೇಶ ಎತ್ತರದಲ್ಲಿದೆ ಎಂಬ ತಾಂತ್ರಿಕ ಕಾರಣವನ್ನು ನೀಡಿರುವುದು ಸರಿಯೇ ;

ಈ) ಸರಿಯಾಗಿದ್ದಲ್ಲಿ, ಆ ಕುರಿತು ಸರ್ಕಾರದ ಸ್ಪಷ್ಟೀಕರಣವೇನು ;

ಉ) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಲಿಫ್ಟ್ ಮೂಲಕ ಬ್ಯಾಡಗಿ ತಾಲ್ಲೂಕಿಗೆ ನೀರನ್ನು ಹರಿಸುವ ಸಾಧ್ಯತೆಗಳನ್ನು ಪರಿಶೀಲಿಸಿ, ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

ಊ) ಮೀಸಲು ಕ್ಷೇತ್ರವಾದ ಬ್ಯಾಡಗಿ ತಾಲ್ಲೂಕು ಹಿಂದುಳಿದ ಪ್ರದೇಶವಾಗಿದ್ದು, ನೀರಾವರಿಯ ಕುರಿತಾದ ಅನ್ಯಾಯವನ್ನು ಸರಿಪಡಿಸಲು ಸರ್ಕಾರದ ಕ್ರಮಗಳೇನು ;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಆಡಳಿತಾತ್ಮಕವಾಗಿ ಅನುಮೋದನೆಗೊಂಡಿರುವ ತುಂಗಾ ಮೇಲ್ದಂಡೆ ಯೋಜನೆಯ ಅಡಿ ಬ್ಯಾಡಗಿ ತಾಲ್ಲೂಕಿನ ಪ್ರದೇಶವು ಸೇರಿರುವುದಿಲ್ಲ.

ಆ) ತುಂಗಾ ಮೇಲ್ಕಂಡ ಯೋಜನೆಯ ಮುಖ್ಯ ಕಾಲುವೆಯು ಕಾಂಟೂರ್ ಕಾಲುವೆ ಆಗಿದ್ದು, ಕಾಲುವೆಯ ಬಲಭಾಗದಲ್ಲಿನ ಪ್ರದೇಶವು ನೀರಾವರಿಗೆ ಒಳಪಡುತ್ತದೆ. ಬ್ಯಾಡಗಿ ತಾಲ್ಲೂಕು ಕಾಲುವೆಯ ಎಡಭಾಗದಲ್ಲಿದ್ದು, ಭೌಗೋಳಿಕವಾಗಿ ಎತ್ತರದ ಪ್ರದೇಶದಲ್ಲಿರುವುದರಿಂದ ಅಚ್ಚುಕಟ್ಟಿನವ್ಯಾಪ್ತಿಯಲ್ಲಿ ಸೇರಿರುವುದಿಲ್ಲ.

ಇ) ಹೌದು.